ಓ.ಎಸ್. ನಂ. 75/2017
PW-1

**<u>ಸಾಕ್ಷಿಯನ್ನು ದಿನಾಂಕ: 04-03-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿಗಳ ಪರ ಶ್ರೀ SR ವಕೀಲರಿಂದ</u>**

1. ನನ್ನ ಜನ್ಮ ದಿನಾಂಕ 01.06.1963. ನಾನು ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಪ್ರತಿವಾದಿಗಳು ನನ್ನ ಸಂಬಂಧಿಕರಲ್ಲ. ದಾವಾ ಆಸ್ತಿಯನ್ನು ಪ್ರತಿವಾದಿಗಳಿಂದ ಬಿಡಿಸಿಕೊಡುವಂತೆ ಈ ದಾವೆಯನ್ನು ಸಲ್ಲಿಸಿರುತ್ತೇವೆ. ದಾವಾ ಸಂಃ136 ವಿಸ್ತೀರ್ಣ 9 ಎಕರೆ 18 ಗುಂಟೆ ಇರುತ್ತದೆ. ದಾವಾ ಆಸ್ತಿಯ ಪೂರ್ತಿ ವಿಸ್ತೀರ್ಣದಲ್ಲಿ ಮೊದಲು ಸ್ವಾಧೀನದಲ್ಲಿದ್ದು ಈಗ 4 ಎಕರೆ 20 ಗುಂಟೆಯಲ್ಲಿ ಸ್ವಾಧೀನದಲ್ಲಿರುತ್ತೇವೆ. ನಾವು 3 ಎಕರೆ 20 ಗುಂಟೆ ವಿಸ್ತೀರ್ಣದಲ್ಲಿ ಮಾತ್ರ ಸ್ವಾಧೀನದಲ್ಲಿರುತ್ತೇವೆಂದರೆ ಸರಿಯಲ್ಲ. 1956 ರಿಂದ 1960 ನೇ ಸಾಲಿನವರೆಗೂ ಪಾತಗಾನಹಳ್ಳಿ ಗ್ರಾಮದಲ್ಲಿ ನರಸೀಯಪ್ಪ ನರಸಪ್ಪ, ಕುಂಬಯ್ಯ ಮತ್ತು ಕುಂಬೀನರಸಯ್ಯ ಎಂಬ ಹೆಸರಿನ ವ್ಯಕ್ತಿಗಳು ಎಷ್ಟುಜನ ಇದ್ದರೆಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಮೇಲೆ ಹೇಳಿದ ಹೆಸರಿನ ವ್ಯಕ್ತಿಗಳು ತುಂಬಾ ಜನ ಇದ್ದರು ಎಂದರೆ ಇರಬಹುದು. ದಾವಾ ಆಸ್ತಿ ಎ ಕೆ ನರಸೀಯಪ್ಪ ಅಲಿಯಾಸ್ ನರಸಪ್ಪ ಬಿನ್ ಕುಂಬೀನರಸಯ್ಯರವರಿಗೆ ಮಂಜೂರಾಗಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಖಾತೆಯು 1 ನೇ ಪ್ರತಿವಾದಿ ತಂದೆ ಕುಂಭಿನರಸಯ್ಯರವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನೀಡಿದ ಮಂಜೂರಾತಿ ಪತ್ರದಲ್ಲಿ ನರಸೀಯಪ್ಪ ಬಿನ್ ಕುಂಬೀನರಸಯ್ಯ ಎಂಬುದರ ಬದಲಾಗಿ ನರಸಪ್ಪ ಬಿನ್ ಕುಂಬಯ್ಯ ಎಂದು ನಮೂದಾಗಿರುತ್ತದೆ ಎಂದು ಬರೆದಿರುತ್ತಾರೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ತಂದೆ ಅವಿಧ್ಯಾವಂತರು ಎಂದರೆ ಸರಿಯಲ್ಲ, ವಿದ್ಯಾವಂತರಾಗಿದ್ದರು.

2. ದಿಃ 06.06.1975 ರಂದು ನರಸೀಯಪ್ಪ ಬಿನ್ ಕುಂಬಿನರಸಯ್ಯರವರು ನನ್ನ ತಾಯಿಗೆ ದಾವಾ ಸರ್ವೆ ನಂಬರ್ ನ ಪೈಕಿ 3 ಎಕರೆ 20 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆಂದರೆ ಸರಿ, ನನ್ನ ತಾಯಿಯನ್ನು ಕರೆದುಕೊಂಡು ಹೋಗಿ ಆ ರೀತಿ ಪತ್ರವನ್ನು ಬರೆಸಿರುತ್ತಾರೆ. 1979-80 ನೇ ಸಾಲಿನಲ್ಲಿ ದಾವಾ ಆಸ್ತಿಯ ಪಹಣಿ ಪತ್ರಿಕೆ ನರಸೀಯಪ್ಪ ಬಿನ್ ಕುಂಬಿನರಸಯ್ಯರವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ್ ನಲ್ಲಿ 5 ಎಕರೆ 35 ಗುಂಟೆ 1 ನೇಪ್ರತಿವಾದಿ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ.

3. ನರಸೀಯಪ್ಪ ಬಿನ್ ಕುಂಬಯ್ಯ ನನ್ನ ತಾತ. ಆ ಬಗ್ಗೆ ನಾನು ವಂಶವೃಕ್ಷ ಮತ್ತು ಮರಣಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 1 ನೇ ಪ್ರತಿವಾದಿ ಹೆಸರಿಗೆ ದಾವಾ ಆಸ್ತಿಯ ಖಾತೆಯು 2001 ನೇ ಸಾಲಿನಲ್ಲಿ ಬದಲಾವಣೆ ಆಗಿರುತ್ತದೆ. ದಾವಾ

ಆಸ್ತಿಯ ಖಾತೆಯು 1960 ನೇ ಸಾಲಿನಿಂದ 1 ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಆ ರೀತಿ ಖಾತೆ ಇದ್ದರೂ ನಾವು ಸುಮ್ಮನೆ ಇದ್ದೆವು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹೆಸರಿಗೆ ಖಾತೆ ಆಗಿರುವುದನ್ನು ನಮಗೆ ಗೊತ್ತಿಲ್ಲದೆ ಇರುವ ಕಾರಣ ನಾವು ಪ್ರಶ್ನೆ ಮಾಡಿರುವುದಿಲ್ಲ. ನಾವು ಮಧುಗಿರಿ ಎಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿ ವಜಾಗೊಂಡಿರುತ್ತದೆ ಎಂದರೆ ಸರಿ. 1956 ನೇ ಇಸವಿಯಿಂದ 2015 ನೇ ಸಾಲಿನವರೆಗೂ ದಾವಾ ಆಸ್ತಿಯ ಖಾತೆಯು 1 ನೇ ಪ್ರತಿವಾದಿ, ಕುಂಬಯ್ಯ ಮತ್ತು ಕುಂಬೀನರಸಯ್ಯರವರ ಹೆಸರಿನಲ್ಲಿರುವ ಬಗ್ಗೆ ನಮಗೆ ಗೊತ್ತಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿ ಕಂದಾಯವನ್ನು ಕಟ್ಟುತ್ತಿರುತ್ತಾರೆಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**